

# ಕೀಟ ಪ್ರಪಂಚ!

ನಮ್ಮ ಪ್ರಕೃತಿಯಲ್ಲಿ ಅನೇಕ ಕೀಟಗಳನ್ನು ನೋಡುತ್ತೇವೆ. ವಿವಿಧ ಆಕಾರಗಳ, ವಿವಿಧ ಬಣ್ಣಗಳ ಕೀಟಗಳು ಎಷ್ಟೋ ಕೀಟಗಳು ಕಣ್ಣಿಗೆ ಕಾಣದಿದ್ದರೂ ಅವುಗಳ ಧ್ವನಿಯನ್ನು ಕೇಳುತ್ತೇವೆ. ನಮ್ಮ ಸುತ್ತಮುತ್ತ ನೋಡುವ ಕೀಟಗಳಲ್ಲಿ ದೊಡ್ಡದು ಮತ್ತು ಚಿಕ್ಕವೂ ಇರುತ್ತದೆ. ಆದರೆ ಜಗತ್ತಿನಲ್ಲೇ ಅತ್ಯಂತ ದೊಡ್ಡ ಮತ್ತು ಅತ್ಯಂತ ಚಿಕ್ಕ ಕೀಟದ ಬಗ್ಗೆ ಇಲ್ಲಿದೆ ಮಾಹಿತಿ.

**ಜಗತ್ತಿನ ಅತ್ಯಂತ ದೊಡ್ಡ ಕೀಟ**

ಅಮೆರಿಕಾದಲ್ಲಿ ಕಾಣುವ ಗೋಲಿಯಥ್ ಬೀಟಲ್ ಎನ್ನುವ ಕೀಟ ಜಗತ್ತಿನಲ್ಲೇ ಅತ್ಯಂತ ದೊಡ್ಡದು. ಇದು ಅತ್ಯಂತ ಹೆಚ್ಚು ತೂಕ ಉಳ್ಳದ್ದೂ ಹೌದು. ಇದು ಆರು ಇಂಚು ಉದ್ದ ಬೆಳೆಯುತ್ತದೆ; ತೂಕ 200 ಗ್ರಾಂ ಇರುತ್ತದೆ. ಇದರ ದೇಹ ಗಾಢ ಕೆಂಪು ಬಣ್ಣವನ್ನು ಹೊಂದಿದ್ದು ತಲೆಯಲ್ಲಿ ಕಪ್ಪು ಮತ್ತು ಬಿಳಿಯ ಪಟ್ಟೆಗಳು ಇದ್ದು ಜೊತೆಗೆ ಕಾಲು ಇಂಚು ಉದ್ದದ ಎರಡು ಶೃಂಗಗಳು ಇರುತ್ತದೆ. ದಕ್ಷಿಣ ಅಮೆರಿಕಾದಲ್ಲಿ ಹಲವು ಜೀರುಂಡೆಗಳು ಐದೂವರೆ ಇಂಚಿಗಿಂತಲೂ ಉದ್ದವಾಗಿ ಇರುತ್ತದೆ.

**ಜಗತ್ತಿನ ಅತ್ಯಂತ ಚಿಕ್ಕ ಕೀಟ**

ಬ್ಯಾಟಲ್ ಡೋರ್ ವಿಂಗ್ ಫೈರಿ ಫ್ಲೈ ಮತ್ತು ಹೈರಿ ವಿಂಗ್ಡ್ ಬೀಟಲ್ ಎನ್ನುವ ಪರಾವಲಂಬಿ ಕೀಟಗಳೇ ಜಗತ್ತಿನ ಅತ್ಯಂತ ಚಿಕ್ಕ ಕೀಟಗಳು. ಇವು ಕಣಜದ ಗುಂಪಿಗೆ ಸೇರಿದವು. ಇದರ ಉದ್ದ ಒಂದು ಇಂಚನ್ನು 125 ಭಾಗ ಮಾಡಿ ಅದರಲ್ಲಿ ಒಂದು ಭಾಗದಷ್ಟು! ಅಂದರೆ 1/125 ಇಂಚಿನಷ್ಟು!

ಒಂದು ಜೀವಕೋಶ ಇರುವ ಪ್ರಾಣಿಗಿಂತಲೂ ಇದು ಚಿಕ್ಕದು. ಒಂದು ಸೂಜಿಯ ಮೊನಚಾದ ತುದಿಯ ಮೇಲೆ ಈ ಸಣ್ಣ ಸೈಜಿನ ಹಲವು ಕೀಟಗಳನ್ನು ಇಡಬಹುದು.

■ ವೀಣಾ

